# : ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ :

ನಂ:ನಸ/ಆಡಳಿತ/:ವಹಿ/ಟೆ.ಪ್ರ.09–10/634 ದಿನಾಂಕ :25–09–2009

## ಅಲ್ಪಾವಧಿ ಟೆಂಡರ ಪ್ರಕಟಣೆ

ಗದಗ–ಬೆಟಗೇರಿ ಅವಳಿ ನಗರದಲ್ಲಿ ಕೈಕೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ವಾರ್ಡವಾರ ಸ್ಥಳ ಪರಿಶೀಲಿಸಿ ಹಾಗೂ ಅವಳಿ ನಗರದ ಪ್ರಮುಖ ರಸ್ತೆಗಳ (ಪರಿಪೂರ್ಣವಾದ ಶೀಳು ನಕ್ಷೆ ಇತರೇ) ನಕ್ಷೆ ಹಾಗೂ ಅಂದಾಜು ಪತ್ರಿಕೆ ತಯಾರಿಸುವುದು ಹಾಗೂ ಕಾಮಗಾರಿಗಳ ಮೇಲ್ವಿಚಾರಣೆ ಮಾಡಲು (ಧಾರವಾಡ ವೃತ್ತದ ಎಸ್.ಆರ್. ಪ್ರಕಾರ) ಕುರಿತು **ಡಿಪ್ಲೋಮಾ ಸಿವಿಲ್ ಅಭಿಯಂತರರಿಂದ** ರೂ.1000.00 ರಿಂದ ರೂ.1.00 ಲಕ್ಷದವರೆಗೆ ಹಾಗೂ **ಬಿ.ಇ.(ಸಿವ್ಹಿಲ್) ಪದವೀಧರರಿಂದ** ರೂ.1.00 ಲಕ್ಷದಿಂದ ರೂ.5.00ಲಕ್ಷ ಮೇಲ್ಪಟ್ಟು ಹಾಗೂ ತಾಂತ್ರಿಕ ಪರಿಣಿತ ಹೊಂದಿದ ಕನ್ಸಲ್ಟಂಟಗಳಿಂದ ರಕಂವೈಜ್ ಅಂದಾಜು ಪತ್ರಿಕೆ ತಯಾರಿಸಲು ಹಾಗೂ ಕಾಮಗಾರಿ ಮೇಲ್ವಿಚಾರಣೆ ಮಾಡಿ ನಿರ್ವಹಿಸಲು ಈ ಕೆಳಗೆ ಕಾಣಿಸಿದ ದರಗಳಿಗೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಕಾರಣ ತಮ್ಮ ಕಡಿಮೆ ದರವಾರಗಳನ್ನು ಶೀಲ್‌ಬಂದ ಲಕೋಟೆಯಲ್ಲಿ ದಿನಾಂಕ:08–10–2009 ರಂದು ಸಾಯಂಕಾಲ 4–00 ಗಂಟೆಯೊಳಗಾಗಿ ದರಪಟ್ಟಿಗಳನ್ನು ಸಲ್ಲಿಸಲು ವಿನಂತಿಸಿದೆ ಹಾಗೂ ಅವಧಿ ಮೀರಿ ಬಂದ ಟೆಂಡರ ಲಕೋಟೆಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ ಮಂಜೂರ ವ ನಾಮಂಜೂರ ಮಾಡುವ ಅಧಿಕಾರ ನಗರಸಭೆ ಕಾಯ್ದಿರಿಸಿಕೊಂಡಿದೆ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಗದಗ–ಬೆಟಗೇರಿ ನಗರಸಭೆ ಇವರನ್ನು ಕಛೇರಿ ವೇಳೆಯಲ್ಲಿ ಭೇಟಿಯಾಗಿ ಮಾಹಿತಿ ಪಡೆಯಬಹುದು.

1) ರೂ.1000 ದಿಂದ ರೂ.20000 ವರೆಗೆ ದರ ಹಾಗೂ ಕಾಮಗಾರಿಗಳ ಮೇಲ್ವಿಚಾರಣೆ ನಿರ್ವಹಿಸುವುದು ಸಹ ಸೇರಿ.
2) ರೂ.20000 ದಿಂದ ರೂ.1.00 ಲಕ್ಷದವರೆಗೆ ದರ
3) ರೂ.1.00 ಲಕ್ಷ ದಿಂದ ರೂ.5.00 ಲಕ್ಷದ ಹಾಗೂ ಅದಕ್ಕಿಂತ ಹೆಚ್ಚಿಗೆ ರಕಂಗೆ ದರ

ಸಹಿ ಆಗಿದೆ.
ಅಧ್ಯಕ್ಷರು,
ಗದಗ–ಬೆಟಗೇರಿ ನಗರಸಭೆ

ಸಹಿ ಆಗಿದೆ.
ಪೌರಾಯುಕ್ತರು,
ಗದಗ–ಬೆಟಗೇರಿ ನಗರಸಭೆ